**<u>ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 1 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ. ಪಿ.ಎಂ.ವಿ. ವಕೀಲರಿಂದಃ</u>**

1. ವಾದಿಯರು ದಾವೆ ಸಲ್ಲಿಸಿದ ಬಗ್ಗೆ ಗೊತ್ತಿರುತ್ತದೆ. ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಲಾಗಿರುತ್ತದೆ ಖುಲಾ ಜಾಗೆ ಇರುವುದಿಲ್ಲ. ವಾದಿಯ ಆಸ್ತಿಯಲ್ಲಿ ಬಾಡಿಗೆದಾರನಾಗಿರುವುದಿಲ್ಲ. ದಾವಾ ಆಸ್ತಿಯ ಅಕ್ಕ-ಪಕ್ಕ ನಾನು ವಾಸಿಸುವುದಿಲ್ಲ. ದಾವಾ ಆಸ್ತಿಯಿಂದ ನಮ್ಮ ಮನೆ ದೂರದಲ್ಲಿ ಇರುತ್ತದೆ. ವಾದಿಯ ಜಾಗದ ಪೂರ್ವಕ್ಕೆ ಯಾವುದೇ ದೇವಸ್ಥಾನ ಇರುವುದಿಲ್ಲ. ವಾದಿಯ ಪೂರ್ವ ಜಾಗದಲ್ಲಿ ಯಾರು ಇರುವುದಿಲ್ಲ.

2. ರುದ್ರಪಶುಪತಿ ದೇವಸ್ಥಾನ ನಾನು ಹುಟ್ಟುವ ಮುಂಚೆಯಿಂದ ಹಳೆ ಕೋಲ್ಹಾರದಲ್ಲಿ ಇತ್ತು. ರುದ್ರ ಪಶುಪತಿ ದೇವಸ್ಥಾನವನ್ನು ನಾನು ನೋಡಿರುವುದಿಲ್ಲ. ಹಳೆ ಕೋಲ್ಹಾರದಲ್ಲಿ ರಾಚೋಟಿ ಮತ್ತು ವೀರಭದ್ರೇಶ್ವರ ದೇವಸ್ಥಾನ ಇತ್ತು ಎಂದರೆ ಸಾಕ್ಷಿಯು ಎರಡು ಒಂದೇ ದೇವಸ್ಥಾನವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದೇವಸ್ಥಾನಕ್ಕೆ ಮುಂಬೈ ನ್ಯಾಸ ಅಧಿನನಿಯಮದ ಅಡಿ ನೋಂದಣಿಯಾಗಿದ್ದು, ನಾನು ಅದಕ್ಕೆ ಸದಸ್ಯನಾಗಿದ್ದೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ಪಿ.ಡಬ್ಲ್ಯೂ-3 ರ ತಂದೆಯವರು ಅಧ್ಯಕ್ಷರು ಆಗಿದ್ದರು ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿದ್ದು ಅದರಲ್ಲಿ ಇರುವ ಹೆಸರು ನನ್ನದು ಆಗಿರುತ್ತದೆ ಎಂದರೆ ಸರಿ, ಸದರಿ ದಾಖಲಾತಿಯಲ್ಲಿ ಇರುವ ಭಾಗವನ್ನು ನಿಡಿ-5 ಎ ಎಂದು ಗುರುತಿಸಲಾಯಿತು. ಸದರಿ ದೇವಸ್ಥಾನಕ್ಕೆ ಡಿ-76 ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 1676 ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

3. ಸದರಿ ಡಿ-76 ಕ್ಕೆ ಜವಳಿ ಇರುವ ಕಾರಣ ವಾದಿಯ ಜಮೀನಿನ ಪಕ್ಕದಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಂದಣಿ ಕಾಲದಿಂದಲೂ ಸಹ ರಾಚೋಟೇಶ್ವರ ದೇವಸ್ಥಾನ ಹೊರತುಪಡಿಸಿ ರುದ್ರಪಶುಪತಿ ಯಾವುದೇ ದೇವಸ್ಥಾನ ಇರಲ್ಲಿಲ್ಲಾ ಎಂದರೆ ಸರಿಯಲ್ಲ. ನಾನು

ನೋಂದ ಮಾಡಿಕೊಂಡಿರುವ ದಾಖಲಾತಿಯಲ್ಲಿ ಯಾವುದೇ ರುದ್ರಪಶುಪತಿ ದೇವಸ್ಥಾನ ಇರಲ್ಲಿಲ್ಲಾ ಎಂದರೆ ಸಾಕ್ಷಿಯು ಸದರಿ ದೇವಸ್ಥಾನ ಬೇರೆ ಬೇರೆ ಎಂದು ನುಡಿಯುತ್ತಾರೆ. ವಾದಿಯ ಪಕ್ಕದಲ್ಲಿ ಇರುವ ದೇವಸ್ಥಾನವನ್ನು ಕಬಳಿಸುತ್ತಿದ್ದಾರೆ ಎಂದು ಪ್ರತಿಕೆಯಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೋಲ್ಹಾರದಲ್ಲಿ ಇರುವ ಕುಂಬಾರ ಮನೆತನದಮ ವೀರಭದ್ರೇಶ್ವರ ದೇವರ ಭಕ್ತರು ಎಂದರೆ ಸರಿ.

4. ಸಾಕ್ಷಿಗೆ ನಿಪಿ-5 ಮತ್ತು 6 ದೇವಸ್ಥಾನ ದಾವಾ ಆಸ್ತಿಗೆ ಸಂಬಂಧಪಟ್ಟ ಫೋಟೋಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಬಾಡಿಗೆದಾರರಾಗಿ ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉದ್ದ ಅಳತೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಕ್ಕದಲ್ಲಿ ವೀರಭದ್ರೇಶ್ವರ ದೇವರ ಮೂರ್ತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ವೀರಭದ್ರೇಶ್ವರ ಕಮೀಟಿಯಲ್ಲಿ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1670 ರಲ್ಲಿ ರುದ್ರಪಶುಪತಿ ದೇವಸ್ಥಾನ ಇತ್ತು. ಸದರಿ ಕಮೀಟಿಯಲ್ಲಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಕಮೀಟಿಯಲ್ಲಿ ಇದ್ದಾಗ ಮುಳಗಡೆ ಹಣ ಬಂದಿರುತ್ತದೆ ಎಂದರೆ ಸರಿಯಲ್ಲ.

5. ರುದ್ರಪಶುಪತಿ ದೇವಸ್ಥಾನ ಆಸ್ತಿ ನಂ.72 ಆಗಿರುತ್ತದೆ. ದೇವಸ್ಥಾನದ ಹಣದ ವಿಷಯವಾಗಿ ಮಾನ್ಯ ಹಿರಿಯ ನ್ಯಾಯಾಲಯ ಬ.ಬಾಗೇವಾಡಿಯಲ್ಲಿ ದಾವೆ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಯ ದೇವಸ್ಥಾನದ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾನೆ ಎಂದು ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಕರಾರು ಮಾಡಿದ ಕಾರಣ ವಾದಿಯು ದಾವೆ ಸಲ್ಲಿಸಿರುತ್ತಾರೆ, ದಿನಾಂಕ ನನಗೆ ಗೊತ್ತಿರುವುದಿಲ್ಲ. ವಾದಿಯು ದೂರು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ.

6. ರುದ್ರಪಶುಪತಿ ದೇವಸ್ಥಾನ ಸನ್ 2006 ರಲ್ಲಿ ಬಂದಿದ್ದು, ಅದಕ್ಕಿಂತ ಮುಂಚೆ ಇರಲ್ಲಿಲ್ಲಾ ಎಂದರೆ ಸರಿಯಲ್ಲ. ನಾನು ಈಗ ರಾಚೋಟ ವೀರಭದ್ರೇಶ್ವರ ದೇವಸ್ಥಾನದ ಕಮೀಟಿಯಲ್ಲಿ

ಇರುತ್ತೇನೆ. ವಾದಿಯ ಆಸ್ತಿಯ ಪಕ್ಕದಲ್ಲ ಇರುವ 15 ಫೂಟ ಜಾಗಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯು 100 ಪಡೆದುಕೊಳ್ಳುತ್ತಾರೆ ವಾದಿಯು ಉಳಿದ ಹಣ ಪಡೆದುಕೊಳ್ಳುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

7. ಮುಳಗಡೆ ಕಛೇರಿಯವರು ರುದ್ರಪಶುಪತಿ ದೇವಸ್ಥಾನದವರು ಮುಳಗಡೆ ಹಣವನ್ನು ಪೆಡದುಕೊಂಡಿರುತ್ತಾರೆ ಅವರ ವಿರುದ್ಧ ಕ್ರಮ ಕೈಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿ.ಡಬ್ಲ್ಯೂ-3 ರವರು ರುದ್ರಪಶುಪತಿಯ ಕಮೀಟಿಯಲ್ಲಿ ಇರುತ್ತಾರೆ. ವಾದಿಯ ಪೂರ್ವ ದಿಕ್ಕಿನಲ್ಲಿ ಇರುವ ಜಾಗವನ್ನು ರಾಚೋಟೇಶ್ವರ ದೇವಸ್ಥಾನಕ್ಕೆ ನೀಡಿದ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ರಾಚೋಟೇಶ್ವರ ದೇವಸ್ಥಾನಕ್ಕೆ ಜಾಗ ಹೋಗಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸಂಪೂರ್ಣ ಕಟ್ಟಡ ಕಟ್ಟಿದ್ದು ಯಾವುದೆ ಖುಲ್ಲಾ ಜಾಗ ಇಲ್ಲ ಎಂದರೆ ಸರಿಯಲ್ಲ, ಜಾಗ ಉಳಿದಿರುತ್ತದೆ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಖುಲ್ಲಾ ಜಾಗಕ್ಕೆ ತಕರಾರು ಸಲ್ಲಿಸಿದ ಕಾರಣ ದಾವೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

8. ರಾಚೋಟೇಶ್ವರ ದೇವಸ್ಥಾನಕ್ಕೆ ನಾನು ಕಮೀಟಿಯಲ್ಲಿ ಇರುವಾಗ 4 ಗುಂಟೆ ಜಾಗವನ್ನು ಹಂಚಿಕೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಾಚೋಟ ವೀರಭದ್ರೇಶ್ವರ ಜಾಗಕ್ಕೆ 10 ಗುಂಟೆ ಜಾಗ ಇರುತ್ತದೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕಮೀಟಿಯಲ್ಲಿ ಇರುವಾಗ ಶಾಸನ ಶಿವಾನಂದ ಪಾಟೀಲರವರು ರಾಚೋಟೇಶ್ವರ ದೇವಸ್ಥಾನ ಜಾಗ ಡಿ-76 ಸವಳು ಇರುತ್ತದೆ ಎಂದು ಬೇರೆ ಕಡೆ ನೀಡಿ ಎಂದು ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕಮೀಟಿಯಲ್ಲಿ ಇರುವಾಗ ವಿದ್ಯುತ್ ಸಂಪರ್ಕ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಚೋಟೇಶ್ವರ ದೇವಸ್ಥಾನ ಜಾಗ ಎಂದು ಗೊತ್ತಿದ್ದರು ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್‌ಃ 21/2019

ಪಿ.ಡಬ್ಲ್ಯೂಃ 02

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)

ದಿವಾಣಿ ನ್ಯಾಯಾಧೀಶರು ಮತ್ತು

ನ್ಯಾಯಿಕ ದಂಡಾಧಿಕಾರಿಗಳು

ಬಸವನ ಬಾಗೇವಾಡಿ.